ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಇನ್ವಾಲ್ವ್ ಆಗಿ ಪ್ರೊಟೆಸ್ಟ್ ಮಾಡಬೇಕೆಂದು ಮಾಡುತ್ತಿದ್ದಾರೆ. ಇದರಿಂದ ಪರಿಣಾಮ ಬೀರುವ ಸಾಧ್ಯತೆ ಇದೆ. ಇದರಲ್ಲಿ ಸಾಹಿತಿಗಳು ಇದ್ದಾರೆ, ಕೆಲವು ಸ್ವಾಮಿಗಳೂ ಇದರಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಕಾನ್ಸ್‌ಟೆನ್ಸ್‌ಗಳು ಆಗುತ್ತಿವೆ. ಇಂತಹ ಸಮಯದಲ್ಲಿ ಎಲ್ಲೂ ಒಂದಾ ಕಡೆ ಏನಾದರೂ ಪ್ರಾಮಿಸ್ ಮಾಡಿದರೆ ಪರಿಣಾಮ ಬೇರೆಯಾಗುತ್ತದೆ.

ಅಧ್ಯಕ್ಷರು.—ಯಾವ ಶಕ್ತಿ ಬಂದರೂ ಮಣಿಯುವುದಿಲ್ಲ ಎಂದು ಹೇಳಿ.

ಶ್ರೀ ಜೆ.ಎಚ್.ಪಟೇಲ್.—ಸ್ವಾಮಿಗಳ ಪತ್ರದ ಬಗ್ಗೆ ಯಾವ ವಿಷಯದಲ್ಲಿ ಅಭಿಪ್ರಾಯ ಕೇಳಬೇಕೋ ಅದನ್ನು ಕೇಳುತ್ತೇವೆ, ಕೈಗಾ ಬಗ್ಗೆ ಕೇಳುವುದಿಲ್ಲ. ಎಷ್ಟೇ ದೊಡ್ಡ ಸಾಹಿತಿಗಳು ವಿರೋಧ ಮಾಡಿದರೂ ಅವರ ಪುಸ್ತಕಗಳನ್ನು ಓದುವುದು ಬೇರೆ ಕಾರಣಕ್ಕಾಗಿ ಹೊರತು ಕೈಗಾ ಕಾರಣಕ್ಕಾಗಿ ಅಲ್ಲ. ಇದರ ಬಗ್ಗೆ ರಾಷ್ಟ್ರಮಟ್ಟದ ತಜ್ಞರು ಬಂದು ವಿಚಾರ ಮಾಡಿ, ಚರ್ಚೆ ಮಾಡಿ ಶೀರ್ಮಾನಕ್ಕೆ ಬಂದಿದ್ದಾರೆ. ಈಗಾಗಲೇ ಕೇಂದ್ರ-ಸರ್ಕಾರ ೧೫೦ ಕೋಟಿ ರೂಪಾಯಿಗಳನ್ನು ಈ ವರ್ಷದ ಬಜೆಟ್‌ನಲ್ಲಿ ರಿಲೀಸ್ ಮಾಡಿದೆ. It will never be stopped.

ಶ್ರೀ ಆರ್.ಎನ್. ನಾಯಕ್ —ಈಗ ಉತ್ತರ ಕನ್ನಡ ಜಿಲ್ಲೆಯ, ಜಿಲ್ಲಾಪರಿಷತ್ತಿನ ಅಭಿಪ್ರಾಯ ಯೂನಾನಿಮಸ್ ಇದೆಯೆಂದು ಸರ್ಕಾರ ಮನಗಂಡಿರುವುದಕ್ಕೆ ಬಹಳ ಸಂತೋಷವಾಗಿದೆ. ಆದರೆ ಇನ್ನೊಂದು ಕ್ಲಿಯರ್ ಆಗಲಿಲ್ಲ. ಶರಾವತಿ ಟೇಲ್‌ರೇಸ್ ಯೋಜನೆಯ ಕೆಲಸ ನಡೆಯುತ್ತಾ ಇದೆ. ಆದರೆ ಇದಕ್ಕೆ ಬಹಳಷ್ಟು ಜನ ತಡೆ ಒಡ್ಡುತ್ತಿದ್ದಾರೆ, ಗಲಾಟೆ ಮಾಡುತ್ತಿದ್ದಾರೆ. ಇಂತಹವರ ಮೇಲೆ ಕ್ರಿಮಿನಲ್ ಖಟ್ಲೆ ಹಾಕಬೇಕಾಗುತ್ತದೆ. ನಿಮ್ಮ ಪಕ್ಷದವರೇ ಹಲವಾರು ಜನರು ಮುಂದಾಳತ್ವ ವಹಿಸಿ, ತೊಂದರೆ ಕೊಡುತ್ತಿದ್ದಾರೆ. ಇದಕ್ಕೆ ತಡೆ ಹಾಕಬೇಕು, ಇಂತಹ ಜನರ ಮೇಲೆ ಕ್ರಿಮಿನಲ್ ಖಟ್ಲೆ ಹಾಕಬೇಕು, ಇದುವರೆಗೆ ಈ ರೀತಿಯ ಕ್ರಿಮಿನಲ್ ಕಟ್ಲೆ ಹಾಕಿದ್ದೀರಾ ?

ಶ್ರೀ ಜೆ.ಹೆಚ್. ಪಟೀಲ್.—ಶರಾವತಿ ಟೇಲ್ ರೇಸ್ ಪ್ರದೇಶದಲ್ಲಿ ಅರಣ್ಯ ಮುಳುಗಡೆ ಆಗುವುದಿಲ್ಲ, ಯಾವ ಜಮೀನಿಗೂ ತೊಂದರೆ ಆಗುವುದಿಲ್ಲ ಹರಿಯುವ ನದಿ ಕೆಳಗೆ ಅಂಡರ್‌ಗ್ರೌಂಡ್ ಪವರ್ ಹೌಸ ಕಟ್ಟಿ ನೀರನ್ನು ಉಪಯೋಗ ಮಾಡುತ್ತೇವೆ. ಯಾರು ಈ ಬಗ್ಗೆ ಪ್ರತಿಭಟನೆ ಮಾಡುತ್ತಾ ಇದ್ದಾರೆ, ಅದರ ವಿರುದ್ಧ ನೀವು ಈ ಯೋಜನೆ ಆಗಲೇಬೇಕೆಂದು ಪ್ರತಿಭಟನೆ ಮಾಡಿ. There is no problem attached to it, such as enviromental pollution etc.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ.ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಕೃಷ್ಣಾ ಹಾಗೂ ಕಾವೇರಿ ಕಣಿವೆ ನೀರಾವರಿ ಯೋಜನೆ

೩೧೭ ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಹಾಗೂ ಕಾವೇರಿ ಕಣಿವೆಯ ನೀರಾವರಿ ಯೋಜನೆಗಳನ್ನು ಸಂಪೂರ್ಣಗೊಳಿಸಲು ಬೇಕಾದ ಹಣಕಾಸಿನ ಅಂದಾಜು ಮೊತ್ತವೆಷ್ಟು ? ಹಾಗೂ ಈ ಯೋಜನೆಗಳು ಪೂರ್ಣಗೊಳ್ಳಲು ಬೇಕಾದ ಸಮಯವೆಷ್ಟು ?

ಆ) ಮೇಲ್ಕಂಡ ಯೋಜನೆಗಳಡಿಯಲ್ಲಿ ವಿವಿಧ ನೀರಾವರಿ ಯೋಜನೆಗಳಿಗಾಗಿ ಸರ್ಕಾರ ಪ್ರಸಕ್ತ ವರ್ಷ ೧೯೮೮-೮೯ ಫೆಬ್ರವರಿವರೆಗೆ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ಈಗಿನ ಅಂದಾಜಿನ ಪ್ರಕಾರ, ಕೃಷ್ಣ ಹಾಗೂ ಕಾವೇರಿ ಕಣಿವೆಗಳ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಅನುಕ್ರಮವಾಗಿ ೪೦೦೦ ಕೋಟಿ ರೂ.ಗಳು ಮತ್ತು ೧೪೦೦ ಕೋಟಿ ರೂ.ಗಳು ಬೇಕಾಗಿರುತ್ತದೆ. ಸರ್ಕಾರವು ೨೦೦೦ನೇ ಇಸವಿಯೊಳಗೆ ರಾಜ್ಯದ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಲು ಎಲ್ಲಾ ಯೋಜನೆಗಳನ್ನು ಪೂರೈಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಆ) ಪ್ರಸಕ್ತ ವರ್ಷ ೧೯೮೮-೮೯ರ ಜನವರಿ ಅಂತ್ಯದವರೆಗೆ ಕೃಷ್ಣ ಹಾಗೂ ಕಾವೇರಿ ಕಣಿವೆಗಳ ನೀರಾವರಿ ಯೋಜನೆಗಳಿಗಾಗಿ ಅನುಕ್ರಮವಾಗಿ ೮೧.೫೩ ಕೋಟಿ ರೂ.ಗಳಂ ಮತ್ತು ೪೮.೯೬ ಕೋಟಿ ರೂ.ಗಳು ಖರ್ಚಾಗಿರುತ್ತದೆ.

ಲೋಕೋಪಯೋಗಿ ಇಲಾಖೆಯಲ್ಲಿ ಕಂಟ್ರಾಕ್ಟ್ದಾರರಿಗೆ ಬಿಲ್ ಬಾಕಿ

೨೧೬: ಶ್ರೀ ಕೆ: ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪಿಡಬ್ಲ್ಯೂಡಿ ಹಾಗೂ ನೀರಾವರಿ ಇಲಾಖೆಗಳಲ್ಲಿ ಕಂಟ್ರಾಕ್ಟ್ದಾರರಿಗೆ ಬಿಲ್ ಬಾಕಿ ನೀಡಬೇಕೆಂಬ ವರದಿಗಳು ನಿಜವೆ ?

ಆ) ಹಾಗಿದ್ದಲ್ಲಿ ರೂ. ೧೦ ಲಕ್ಷಕ್ಕೂ ಅಧಿಕ ಹಣ ಪಡೆಯಬೇಕಾದ ಖಾಸಗಿ ಕಂಟ್ರಾಕ್ಟರ್ ಅಥವಾ ಸಂಸ್ಥೆಗಳ ಹೆಸರು ಹಾಗೂ ಅವರು ಕೆಲಸ ಮಾಡಿದ ವಿಭಾಗಗಳ ಹೆಸರುಗಳೇನು ? (ಮಾಹಿತಿ ಒದಗಿಸುವುದು)

ಇ) ಈ ಬಿಲ್‌ಗಳ ಪಾವತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಮಂತ್ರಿಯವರು).—

ಅ) ನಿಜ.

ಆ) ೧೦ ಲಕ್ಷ ರೂ.ಗಳಿಗೂ ಅಧಿಕ ಹಣ ಪಡೆಯಬೇಕಾದವರ ವಿವರವನ್ನು ಇದರೊಡನೆ ಲಗತ್ತಿಸಿರುವ ಪಟ್ಟಿಯಲ್ಲಿ ಕೊಡಲಾಗಿದೆ.

ಇ) ಬಾಕಿ ಉಳಿದಿರುವ ಬಿಲ್ಲುಗಳನ್ನು ಶೀಘ್ರವಾಗಿ ಪಾವತಿ ಮಾಡಲಾಗುವುದು.

Names of Contractors and Institutions to whom payments of Rs. 10 lakhs or more is due in or more is due as on 1.3.1989.

Sl. No.	Name of Contractor/ Institution	Amount Due (Rs. in lakhs)	Project	Division
1	2	3	4	
1	Sri Tom-Tom Guruva Reddy	13.53	K.R.S. Modernisation	Design and Investigation Division, Mandya.
2	M/s Srinivasa Construction Co.	106.31	Hemavathi Project	No.1,H.L B.C. Dn., C.R.Patna
3	Cement Corporation of India	42.60	do	do
4	K.E.B.	33.17	do	do
5	Sri B. Kumar-Swamy Reddy	25.00	do	Canal Investigation Division, Hebbur.